ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-2417101

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore. karnataka.gov.in**
E-mail ID: gmtech@cescmysore.org

Company Identity Number[CIN]:- **U40109KA2004SGC035177**

ಕ್ರಮಾಂಕ: ಪ್ರವ್ಯ(ತಾ)/ಉಪವ್ಯ(ತಾ)/ಸಪ್ರವ್ಯ(ತಾ)-3/2021-22/ ಆ/ಸ - 1328

ದಿನಾಂಕ : 04 DEC 2021

# ಸುತ್ತೋಲೆ

ವಿಷಯ : ಕಾರ್ಯ ಮತ್ತು ಪಾಲನಾ ವಿಭಾಗ/ ಉಪವಿಭಾಗ ಕಛೇರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸುವ ಕುರಿತು.

ಉಲ್ಲೇಖ : 1. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ರವರ ಮೌಖಿಕ ಆದೇಶ.
2. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಚಾವಿಸನಿನಿ ರವರ ಅನುಮೋದಿತ ಟಿಪ್ಪಣಿ ದಿನಾಂಕ : 02.12.2021

*********

ಪೀಠಿಕೆ : 1. ಕಾರ್ಯ ಮತ್ತು ಪಾಲನಾ ಕ್ಷೇತ್ರಗಳಲ್ಲಿ ಒಂದೇ ವಿಷಯದ ಬಗ್ಗೆ ನಿರಂತರ ಸಭೆಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಇದರಿಂದ ಗ್ರಾಹಕರಿಗೆ/ ಸಾರ್ವಜನಿಕರಿಗೆ ನಿಯತ ಕೆಲಸಗಳಿಗೆ ಅಧಿಕಾರಿ/ ಸಿಬ್ಬಂದಿಗಳ ಲಭ್ಯವಿಲ್ಲದೆ ತೊಂದರೆಯಾಗುತ್ತಿರುವ ಬಗ್ಗೆ ನಿಗಮ ಕಛೇರಿಗೆ ದೂರುಗಳು ಬಂದಿರುತ್ತವೆ.

2. ಚಾವಿಸನಿನಿ ನಿಗಮದ ಮಾಹೆಯಾನ ವೃತ್ತ ಮಟ್ಟದ ಪ್ರಗತಿ ಪರಿಶೀಲನಾ ಸಭೆಗಳಿಗೆ ವಲಯ/ ವೃತ್ತಗಳಿಂದ ಕ್ರೋಢೀಕರಿಸಿ ಸಲ್ಲಿಕೆಯಾಗುತ್ತಿರುವ ಮಾಹಿತಿಗಳಲ್ಲಿ ಹಲವು ರೀತಿಯ ನ್ಯೂನತೆಗಳು ಪುನರಾವರ್ತನೆಯಾಗಿ ಕಂಡುಬರುತ್ತಿವೆ.

3. ವಲಯ/ ವೃತ್ತಗಳಲ್ಲಿ ಅಂಕಿ ಅಂಶಗಳನ್ನು ಕೂಲಂಕುಷವಾಗಿ ಮಾಹಿತಿಗಳನ್ನು ಸರಿಯಾಗಿ ಕ್ರೋಢೀಕರಿಸುವ ಅವಶ್ಯಕತೆ ಇರುತ್ತದೆ.

ಈ ಹಿನ್ನಲೆಯಲ್ಲಿ ಸಮಸ್ಯೆಗಳಿಗೆ ಸೂಕ್ತ ನಿರ್ಧಾರ/ನಿರ್ದೇಶನಗಳನ್ನು ತೆಗೆದುಕೊಳ್ಳಲು ಸರಿಯಾದ/ ನಿಖರವಾದ ಮಾಹಿತಿಗಳು ಬೇಕಾಗಿರುತ್ತದೆ. ಆದುದರಿಂದ ನಿಗಮ ಕಛೇರಿಯಲ್ಲಿ ಸರಿಯಾದ ಮಾಹಿತಿಯನ್ನು ಪಡೆಯುವ ನಿಟ್ಟಿನಲ್ಲಿ ಕಾರ್ಯ ಮತ್ತು ಪಾಲನಾ ವಿಭಾಗ/ ಉಪ-ವಿಭಾಗ ಕಛೇರಿಗಳ ಪ್ರಗತಿ ಪರಿಶೀಲನಾ ಸಭೆಗಳನ್ನು ಈ ಕೆಳಕಂಡಂತೆ ಪಾಲನೆ ಮಾಡಲು ಸೂಚಿಸುವಂತೆ ನಿರ್ದೇಶಿಸಲ್ಪಟ್ಟಿರುತ್ತೇನೆ.

ಮುಂದುವರೆದು ಮಾಹೆಯಾನ ನಿಗಮ ಕಛೇರಿಗೆ ನಿಯತವಾಗಿ ಸಲ್ಲಿಸಬೇಕಾದ ಡಿ.ಸಿ.ಬಿ. ಆಧಾರಿತವಲ್ಲದ ಕ್ರೋಢೀಕರಿಸಿದ ಮಾಹಿತಿಗಳನ್ನು ದಿನಾಂಕ 1 ರಿಂದ 4 ನೇ ತಾರೀಖಿನೊಳಗೆ ಹಾಗೂ ಡಿ.ಸಿ.ಬಿ. ಆಧಾರಿತ ಕ್ರೋಢೀಕರಿಸಿದ ಮಾಹಿತಿಗಳನ್ನು ದಿನಾಂಕ 5 ರಿಂದ 8 ನೇ ತಾರೀಖಿನೊಳಗೆ ಪರಿಶೀಲಿಸಿ ಸಲ್ಲಿಸುವುದು ಹಾಗೂ ನಿಗಮ ಕಛೇರಿಯಲ್ಲಿ ಜರುಗಿದ ಸಭೆಗಳಲ್ಲಿನ ನಿರ್ದೇಶನಗಳ ಅನುಪಾಲನೆ ಮಾಡಿ ನಿಯತವಾಗಿ ವರದಿಯನ್ನು ಸಲ್ಲಿಸುವುದು.

ಆದೇಶ :

ಅಧೀಕ್ಷಕ ಇಂಜಿನಿಯರ್ (ವಿ) ಮತ್ತು ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು ಕಾರ್ಯ ಮತ್ತು ಪಾಲನಾ ವೃತ್ತ ರವರುಗಳು ತಮ್ಮ ವೃತ್ತ ವ್ಯಾಪ್ತಿಯ ಎಲ್ಲಾ ಕಾರ್ಯ ಮತ್ತು ಪಾಲನಾ ವಿಭಾಗಗಳ ತಾಂತ್ರಿಕ/ಕಂದಾಯ ವಿಷಯಗಳ ಪ್ರಗತಿ ಪರಿಶೀಲನೆಯನ್ನು (ವೃತ್ತ ಮಟ್ಟದ ಸಭೆಗೆ ಮಾಹಿತಿಯನ್ನು ಒದಗಿಸುವ ನಿಗಮ ಕಛೇರಿಯ ನಿಗದಿತ ನಮೂನೆಗಳಂತೆ) ಆಯಾ ಕಾರ್ಯ ಮತ್ತು ಪಾಲನಾ ವಿಭಾಗಗಳ ಕಛೇರಿಗಳಲ್ಲಿ ಪ್ರತಿ ಮಾಹೆ 9ನೇ ತಾರೀಖಿನಿಂದ 15 ನೇ ತಾರೀಖಿನ ಒಳಗೆ ನಡೆಸುವುದು. ಪರಿಶೀಲಿಸಿದ ಮಾಹಿತಿಗಳನ್ನು ಕ್ರೋಢೀಕರಿಸಿ ವಲಯ/ನಿಗಮ ಕಛೇರಿಗೆ 16 ನೇ ತಾರೀಖಿನೊಳಗೆ ಸಲ್ಲಿಸುವುದು.

Scanned with CamScanner

ಮುಖ್ಯ ಇಂಜಿನಿಯರ್(ವಿ) ಹಾಗೂ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾ ಮತ್ತು ಪಾ ವಲಯರವರು ಮಾಹೆಯಾನ ಪುನರಾವರ್ತನೆಯಾಗದಂತೆ ಪ್ರತ್ಯೇಕವಾಗಿ ಪ್ರತಿ ವೃತ್ತದಲ್ಲಿ ಕನಿಷ್ಠ ಒಂದು ಕಾರ್ಯ ಮತ್ತು ಪಾಲನಾ ವಿಭಾಗದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವುದು.

ಮುಂದುವರೆದು ಸರ್ಕಾರದ ಮತ್ತು ಇಂಧನ ಇಲಾಖೆಯ ಹಲವು ಹೊಸ ಮತ್ತು ಮಹತ್ವದ ಯೋಜನೆಗಳಿಗೆ ಸಂಬಂಧಿಸಿದ ಎಲ್ಲಾ ಪ್ರಗತಿಗಳನ್ನು ಪರಿಶೀಲಿಸಿ ಸಮುಚಿತ ಮಾರ್ಗದ ಮುಖಾಂತರ ಸಲ್ಲಿಸುವುದು ಹಾಗೂ ನಿಗಮ ಕಛೇರಿಯಲ್ಲಿ ಜರುಗಿದ ಸಭೆಗಳಲ್ಲಿನ ನಿರ್ದೇಶನಗಳ ಅನುಪಾಲನೆ ಮಾಡಿ ನಿಯತವಾಗಿ ವರದಿಯನ್ನು ಸಲ್ಲಿಸುವುದು.

ಪ್ರತಿ ಮಾಹೆ 16ನೇ ತಾರೀಖಿನ ನಂತರ ನಿಗಮ ಕಛೇರಿಯಲ್ಲಿ ಮಾಸಿಕ ವೃತ್ತವಾರು ಪ್ರಗತಿ ಪರಿಶೀಲನಾ ಸಭೆಗಳನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಮತ್ತು ನಿರ್ದೇಶಕರು (ತಾಂತ್ರಿಕ) ರವರ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು. ವೃತ್ತವಾರು/ ವಿಭಾಗಾವಾರು ಕ್ರೋಢೀಕರಿಸಿದ ಅಂಕಿಅಂಶಗಳು/ ಮಾಹಿತಿಗಳನ್ನು ಪರಿಗಣಿಸಿ ವಿಶ್ಲೇಷಣೆ, ಕ್ರಮ ಮತ್ತು ಇತರೆ ನಿರ್ದೇಶನ/ ನಿರ್ಧಾರ / ಮಾರ್ಗಸೂಚಿಗಳನ್ನು ಆದೇಶಿಸುವ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಸೂಚಿಸಲಾಗಿದೆ. ಈ ಆದೇಶವು ಡಿಸೆಂಬರ್ 2021 ರಿಂದ ಅನ್ವಯವಾಗುವಂತೆ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

| ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ. |
|---|

3/12/2021

ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)
ನಿಗಮ ಕಛೇರಿ, ಚಾವಿಸನಿನಿ, ಮೈಸೂರು

ಪ್ರತಿಗಳು :

1. ಮುಖ್ಯ ಆರ್ಥಿಕ ಅಧಿಕಾರಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು (ಆಂ.ಪ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
3. ಮುಖ್ಯ ಇಂಜಿನಿಯರ್ (ವಿ), ಕಾ ಮತ್ತು ಪಾ ವಲಯ, ಚಾವಿಸನಿನಿ, ಮೈಸೂರು/ ಹಾಸನ
4. ನಿಯಂತ್ರಣಾಧಿಕಾರಿ, ಕಾ ಮತ್ತು ಪಾ ವಲಯ, ಚಾ.ವಿ.ಸ.ನಿ.ನಿ, ಮೈಸೂರು/ ಹಾಸನ.
5. ಪ್ರಧಾನ ವ್ಯವಸ್ಥಾಪಕರು, ಖರೀದಿ/ಯೋಜನೆ/ವಾಣಿಜ್ಯ/ಲೆಕ್ಕಗಳು/ಇ.ಆರ್.ಪಿ & ತೆರಿಗೆ/ ಬಿ&ಆರ್/ ಆ ಮತ್ತು ಮಾಸಂ, ನಿಗಮ ಕಛೇರಿ, ಚಾ.ವಿ.ಸ.ನಿ.ನಿ. ಮೈಸೂರು
6. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾ.ವಿ.ಸ.ನಿ.ನಿ. ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
10. ಉಪ ಪ್ರಧಾನ ವ್ಯವಸ್ಥಾಪಕರು (ಎಂ.ಐ.ಎಸ್), ನಿಗಮ ಕಛೇರಿ, ಚಾವಿಸನಿನಿ, ಮೈಸೂರು ರವರ ಮಾಹಿತಿಗಾಗಿ ಹಾಗೂ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
11. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ/ ಮಾಪಕ ಪರೀಕ್ಷಾ ವಿಭಾಗ/ ಜಾಗೃತದಳ, ಚಾ.ವಿ.ಸ.ನಿ.ನಿ, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ವಿಷಯವನ್ನು ತಮ್ಮ ವಿಭಾಗ ವ್ಯಾಪ್ತಿಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ರವರ ಗಮನಕ್ಕೆ ತರಲು ಸೂಚಿಸಿದೆ.
12. ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ, ರವರ ಮಾಹಿತಿಗಾಗಿ.
13. ಎಲ್ಲಾ ಲೆಕ್ಕಾಧಿಕಾರಿಗಳು, ಆಂತರಿಕ ಪರಿಶೋಧನೆ, ವಲಯ/ ವೃತ್ತ/ ವಿಭಾಗ, ಚಾವಿಸನಿನಿ.
14. ಆಪ್ತ ಸಹಾಯಕರು, ವ್ಯವಸ್ಥಾಪಕ ನಿರ್ದೇಶಕರು/ ತಾಂತ್ರಿಕ ಸಹಾಯಕರು, ನಿರ್ದೇಶಕರು (ತಾಂತ್ರಿಕ), ಚಾವಿಸನಿನಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ / ಮಾನ್ಯ ನಿರ್ದೇಶಕರು (ತಾಂತ್ರಿಕ) ರವರ ಗಮನಕ್ಕೆ ತರಲು ಕೋರಲಾಗಿದೆ.

ಮುಖ್ಯ ಕಡತ/ಕಛೇರಿ ಪ್ರತಿ



Scanned with CamScanner